ಮಂಗಳೂರಿನ ಎಂ.ಆರ್.ಪಿ.ಎಲ್. ಸ್ಥಾವರಕ್ಕಾಗಿ ಜಮೀನು ಕಳೆದುಕೊಂಡವರಿಗೆ ಪುನರ್ ವಸತಿ ಕೆಲಸ

93 - ಶ್ರೀ ವಿಜಯಕುಮಾರ್ ಶೆಟ್ಟಿ (ಸೂರತ್ಕಲ್) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ಮಂಗಳೂರಿನ ಎಂ.ಆರ್.ಪಿ.ಎಲ್. ಸ್ಥಾವರಕ್ಕಾಗಿ ಜಮೀನು ಕಳೆದುಕೊಂಡ ನಿರಾಶ್ರಿತರಿಗೆ ಈವರೆಗೆ ಕೆಲಸ ಕೊಡದಿರುವದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನಿರಾಶ್ರಿತರ ಪುನರ್ ವಸತಿಯ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ. ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು) :

ಅ) ಮಂಗಳೂರಿನ ಎಂ.ಆರ್.ಪಿ.ಎಲ್, ಸ್ಥಾವರಕ್ಕಾಗಿ ಜಮೀನು ಕಳೆದುಕೊಂಡ ನಿರಾಶ್ರಿತರು 497 ಜನ ಆಗಿದ್ದು, ಇವರಲ್ಲಿ 156 ಜನರಿಗೆ ಉದ್ಯೋಗ ನೀಡಲಾಗಿದೆ. 325 ಜನರಿಗೆ ಉದ್ಯೋಗದ ಬದಲು ರೂ.1.50 ಲಕ್ಷಗಳನ್ನು ಪ್ರತಿಯೊಬ್ಬರಿಗೂ ನೀಡಿದೆ. ಇನ್ನುಳಿದ 16 ಜನರು ತರಬೇತಿಗಾಗಲೀ ಅಥವಾ ಪರಿಹಾರ ಧನಕ್ಕಾಗಲೀ ಬಂದಿರುವುದಿಲ್ಲ.

ಆ) ಎಂ.ಆರ್.ಪಿ.ಎಲ್. ಸ್ಥಾವರಕ್ಕಾಗಿ ಜಮೀನು ಕಳೆದುಕೊಂಡ ನಿರಾಶ್ರಿತರಿಗೆ ಪುನರ್ ವಸತಿಗಾಗಿ ಮಂಗಳೂರಿನ ಚೆಳಿಯಾರು ಗ್ರಾಮದಲ್ಲಿ ಪುನರ್ ವಸತಿ ಕಾಲೋನಿಗಾಗಿ 90.37ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು ನಿರ್ವಸಿತರಿಗೆ ಬೇಕಾದ ಎಲ್ಲಾ ನಾಗರೀಕ ಸೌಲಭ್ಯಗಳನ್ನು ಒದಗಿಸಲಾಗಿದೆ.

ಶ್ರೀ ವಿಜಯಕುಮಾರ್ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸಂಪೂರ್ಣ ಸತ್ಯಕ್ಕೆ ದೂರವಾದ ಉತ್ತರವನ್ನು ಕೊಟ್ಟಿದ್ದಾರೆ. ಬಹುಶಃ 1994ರಲ್ಲಿ ನಿರ್ವಸಿತಗರಾಗಿದ್ದು ಇಲ್ಲಿಗೆ 8 ವರ್ಷಗಳಾದವು. ಇನ್ನೂ ನಮ್ಮ ಸರ್ಕಾರಕ್ಕೆ ಸರಿಯಾದ ಮಾಹಿತಿ ಸಿಗಲಿಲ್ಲವೆಂದು ಹೇಳಿದರೆ ಬಹಳ ಬೇಸರ ಆಗುತ್ತಿದೆ. ಅದೂ ನಿರಾಶ್ರಿತರ ಬಗ್ಗೆ. ಖಂಡಿತವಾಗಿಯೂ ಮಾನ್ಯಮಂತ್ರಿಗಳು ಇದಕ್ಕೆ ಬೇಕಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಎರಡನೆಯದು, 1992ರಲ್ಲಿ ನಿರ್ವಸಿತಗರಾಗುವಂಥ ಸಂದರ್ಭದಲ್ಲಿ ತಮ್ಮ ಸರ್ವಸ್ವವನ್ನು ಈ ದೇಶದ ಅಭಿವೃದ್ಧಿಗೋಸ್ಕರ ಎಂ.ಆರ್.ಪಿ.ಎಲ್. ಕಂಪನಿಗೆ ತ್ಯಾಗ ಮಾಡಿದಂಥ ಜನರಿಗೆ, ಆ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಖುದ್ದಾಗಿ ಬಂದು 613 ಜನರಿಗೂ ನೌಕರಿಯನ್ನು ಕೊಡುತ್ತೇವೆಂದು ಆಶ್ವಾಸನೆಯನ್ನು ಪತ್ರಿಕೆ ಮೂಲಕ ಮತ್ತು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕೊಟ್ಟಿದ್ದರು. ಈಗ ಕೇವಲ 150 ಜನರಿಗೆ ಮಾತ್ರ ಕೆಲಸ ಕೊಟ್ಟಿದ್ದಾರೆ. ನಾವು ಇನ್ನು ಮುಂದಕ್ಕೆ ಬರುವಂಥ ಕಂಪನಿಯವರ ಮೇಲೆ ಹೇಗೆ ವಿಶ್ವಾಸವಿಡಬೇಕು ಮತ್ತು ನಂಬಬಹುದು ಮಾನ್ಯ ಅಧ್ಯಕ್ಷರೇ, ಇದು ಅತ್ಯಂತ ಗಹನವಾದ ವಿಷಯ

ಮತ್ತು ಕೇವಲ ಇದು ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರವಲ್ಲ ಇಡೀ ಕರ್ನಾಟಕಕ್ಕೆ ಸಂಬಂಧಪಟ್ಟ ಪ್ರಶ್ನೆ. ಸನ್ಮಾನ್ಯ ಸಚಿವರು ಇದರ ಬಗ್ಗೆ ವಿಶೇಷ ಆಸಕ್ತಿ ವಹಿಸಬೇಕು. ಹಿಂದೆ ಶ್ರೀ ಮಾನ್ ದೇವೇಗೌಡರ ಸರ್ಕಾರ ಇರುವಾಗ ಎಲ್ಲಾ 613 ಜನರಿಗೂ ಕೆಲಸ ಕೊಡುವ ಆಶ್ವಾಸನೆ ಕೊಟ್ಟಂಥ ಮಿನಿಟ್ಸ್ ನಮ್ಮ ಹತ್ತಿರ ಇದೆ. ಆದರೆ ಇಷ್ಟರವರೆಗೆ 156 ಜನರಿಗೆ ಮಾತ್ರ ಕೆಲಸ ಕೊಟ್ಟಿದ್ದಾರೆ. ಆಮೇಲೆ ಸನ್ಮಾನ್ಯ ದೇಶಪಾಂಡೆಯವರು ಅಲ್ಲಿಯ ಸಚಿವರಾಗಿದ್ದರು. ಮಾನ್ಯ ದೇವೇಗೌಡರು ಏನು ಆದೇಶವನ್ನು ಕೊಟ್ಟಿದ್ದರು, ಅದನ್ನು ಬದಲಾಯಿಸಿದ್ದಾರೆ. ಮತ್ತು 180 ಜನರಿಗೆ ಕೆಲಸ ಕೊಡಬೇಕೆಂದು ಇನ್ನೊಂದು ಆದೇಶವನ್ನು ಮಾಡಿದ್ದಾರೆ. ಆ ಆರ್ಡರ್ ಮಾಡಿ 4 ವರ್ಷಗಳಾದರೂ ಇಷ್ಟರವರೆಗೆ ಎಷ್ಟು ಜನರಿಗೆ ಕೊಡಬೇಕಾಗಿತ್ತೋ ಅಷ್ಟು ಜನರಿಗೆ ಕೆಲಸ ಕೊಟ್ಟಿಲ್ಲ. ಒಂದೂವರೆ ಲಕ್ಷ ಪರಿಹಾರವನ್ನೇನೋ ಕೊಟ್ಟಿದ್ದಾರೆ. ಅದು ಈಗಾಗಲೇ ಮುಗಿದು ಹೋಗಿದೆ. ಪರಿಹಾರ ಬೇಕಾಗಿಲ್ಲ. ಅವರ ಜೀವನ ಭವಿಷ್ಯಕ್ಕೋಸ್ಕರ ಒಂದು ಕೆಲಸ. ಆ ಕಂಪನಿಯಲ್ಲಿ ಕೆಲಸ ಬೇಕಾದಷ್ಟು ಇದೆ. ಗುಜರಾತ್, ಅಸ್ಸಾಂ, ಬೊಂಬಾಯಿ, ಮಹಾರಾಷ್ಟ್ರ, ತಮಿಳನಾಡು ರಾಜ್ಯಗಳಿಂದ ಜನ ಬಂದು ಕೆಲಸ ಮಾಡುತ್ತಿದ್ದಾರೆ. ಆದರೆ, ಇಲ್ಲಿಯ ನಿರ್ವಸಿತಗರಿಗೆ ಕೊಡಲಿ, ಕರ್ನಾಟಕದವರಿಗೆ ಕೊಡಲಿ.

ಅಧ್ಯಕ್ಷರು : ಉಪ ಪ್ರಶ್ನೆ ಕೇಳಿ. ಸಂಕ್ಷಿಪ್ತವಾಗಿ ಪ್ರಶ್ನೆ ಮಾತ್ರ ಕೇಳಿ.

ಶ್ರೀ ವಿಜಯಕುಮಾರ ಶೆಟ್ಟಿ : ನಾನು ಪ್ರಶ್ನೆಯನ್ನೇ ಕೇಳುತ್ತಿದ್ದೇನೆ. ಇದು ರಿಲೆವೆಂಟ್ ಇದೆ. ಯಾರೂ ಅವರ ಹಕ್ಕಿನ ಬಗ್ಗೆ ಜವಾಬ್ದಾರಿ ತೆಗೆದುಕೊಳ್ಳುತ್ತಿಲ್ಲ, ಇದನ್ನು ಸರಿ ಮಾಡುತ್ತಾ ಇಲ್ಲ. ಇದರಿಂದ ಮೀನುಗಾರರಿಗೆ ತೊಂದರೆಯಾಗಿದೆ. ಅಲ್ಲಿಯ ಜನರಿಗೆ ತೊಂದರೆಯಾಗಿದೆ. ಅಲ್ಲಿ ದೊಡ್ಡ ದೊಡ್ಡ ವಾಹನಗಳು ಹೋಗುವುದರಿಂದ ಅಪಘಾತಗಳು ಆಗುತ್ತಾ ಇದೆ. ಇದನ್ನು ಯಾರೂ ಕೇಳುವವರು ಇಲ್ಲದಹಾಗೆ ಆಗಿದೆ. ಮಾನ್ಯ ಸಚಿವರು ಇದಕ್ಕೆ ವಿಶೇಷವಾದ ಆಸಕ್ತಿ ವಹಿಸಬೇಕು. ಇದೊಂದು ಗಂಭೀರವಾದ ಮತ್ತು ಗಹನವಾದ ಪ್ರಶ್ನೆ.

ಶ್ರೀ ಯು. ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ಇದೊಂದು ಗಂಭೀರವಾದ ಪ್ರಶ್ನೆ. ಇದನ್ನು ಚರ್ಚಿಸುವ ಸಲುವಾಗಿ, ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಮೈಯಿನ್ ಪ್ರಶ್ನೆ ಕೇಳಿದವರು ಮೊದಲು ಕೇಳಲಿ. ಅನಂತರ ನೀವು ಸಪ್ಲಿಮೆಂಟರಿ ಕೇಳಿ.

ಶ್ರೀ ವಿಜಯಕುಮಾರ ಶೆಟ್ಟಿ : ಇದು ಕೇವಲ ಒಂದು ಪ್ರದೇಶಕ್ಕೆ ಸೀಮಿತವಾದುದಲ್ಲ. ಇದು ಇಡೀ ಕರ್ನಾಟಕದ ಪ್ರಶ್ನೆ. ಇದರಿಂದಾಗಿ ಎಂ.ಆರ್.ಪಿ.ಎಲ್. ಬಂದಮೇಲೆ ಯಾವ ಒಬ್ಬನೂ ಜಮೀನು ಬಿಟ್ಟುಕೊಡುವುದಕ್ಕೆ ಕೇಳುತ್ತಾ ಇಲ್ಲ. ಏಕೆಂದರೆ ಅವರು ಅಷ್ಟು ತೊಂದರೆ ಕೊಡುತ್ತಿದ್ದಾರೆ. ಅಲ್ಲಿಯ ಮೀನುಗಾರರಿಗೂ ತೊಂದರೆಯಾಗಿದೆ

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ನನಗೆ ಏನು ಮಾಹಿತಿ ಬಂದಿದೆ, ಅದರ ಮೇಲೆ ಉತ್ತರ ಕೊಟ್ಟಿದ್ದೇನೆ. ಈ ಉತ್ತರ ಸತ್ಯಕ್ಕೆ ದೂರವಾಗಿದೆ ಎಂದು ಮಾನ್ಯ

ಗೌರವಾನ್ವಿತ ಸದಸ್ಯರು ಹೇಳಿದ್ದಾರೆ, ಅದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ನಮ್ಮ ಮಾಹಿತಿ ಪ್ರಕಾರ 497 ಎಫೆಕ್ಟೆಡ್ ಜನ.

ಶ್ರೀ ವಿಜಯಕುಮಾರ ಶೆಟ್ಟಿ : 613 ನಿರ್ವಸಿತರು ಇದ್ದಾರೆ. ನೀವು ಬೇಕಾದರೆ ಕೆ.ಐ.ಎ.ಡಿ.ಬಿ. ಅಧಿಕಾರಿಗಳ ಹತ್ತಿರ ಅಥವಾ ನಿಮ್ಮ ರೆವಿನ್ಯೂ ಡಿಪಾರ್ಟಮೆಂಟ್ ಅಧಿಕಾರಿಗಳನ್ನು ಕೇಳಿ. ಇದು ಎಲ್ಲರಿಗೂ ಗೊತ್ತಿದೆ. ನೀವು 497 ಎಂದು ಹೇಳುವುದು ಸರಿಯಲ್ಲ. ಇದನ್ನು ಒಪ್ಪುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸದಸ್ಯರು ಹೇಳಿದಹಾಗೆ ಈಗಾಗಲೇ 156 ಜನರಿಗೆ ನೌಕರಿ ಕೊಡಲಾಗಿದೆ. ಬಾಕಿ ಜನರಿಗೆ ನೌಕರಿ ಕೊಡುವುದಕ್ಕೆ ಅವಕಾಶ ಇಲ್ಲವೆಂದು ಹೇಳಿದಾಗ ಸಭೆಮಾಡಿ, ಗೌರವಾನ್ವಿತ ಸದಸ್ಯರು ಮುಂಚೆಯಿಂದಲೂ ಆಸಕ್ತಿ ತೆಗೆದುಕೊಂಡಿದ್ದಾರೆ ಅವರು ಶಾಶಕರಾಗದೆ ಇದ್ದಾಗಲೂ ಆಸಕ್ತಿ ತೆಗೆದುಕೊಂಡಿದ್ದಾರೆ ಅಲ್ಲಿದ್ದ ಕಾರ್ಮಿಕರಿಗೆ ಅಲ್ಲಿರುವ ಜನರಿಗೆ ಪುನರ್ವಸತಿ ಸರಿಯಾಗಿ ಮಾಡಬೇಕೆಂದು ಹೇಳಿದ್ದಾರೆ. ಇವರು ತಾಂತ್ರಿಕ ಅರ್ಹತೆ ಪಡೆದಿಲ್ಲವೆಂದು ಕಂಪನಿಯವರು ಹೇಳಿ, ಇವರಿಗೆ ಉದ್ಯೋಗ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ಆಗ ನಾವು ಪ್ರತಿಯೊಬ್ಬ ಕುಟುಂಬಕ್ಕೂ ಒಂದೂವರೆ ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದೇವೆ. ಇನ್ನೂ 16 ಜನರಿಗೆ ಸಿಗಬೇಕಾಗಿದೆ. ಆದರೆ, ಅವರಿಗೆ ಸಿಗುತ್ತಾ ಇಲ್ಲ. Either they will get job or they will get compensation. But we are not able to trace them. ಅವರದು ಆ ಕೆಲಸ ಆಗಬೇಕಾಗಿದೆ. ಇನ್ನು ಪುನರ್ ವಸತಿ ವಿಚಾರದಲ್ಲಿ 90 ಎಕರೆ 37 ಗುಂಟೆ ಜಾಗ ಈಗಾಗಲೇ ಅಕ್ವೈರ್ ಮಾಡಿ ಕೆ.ಐ.ಎ.ಡಿ.ಬಿ.ಮುಖಾಂತರ ಅಲ್ಲಿ ಏನು ಸೌಕರ್ಯಗಳನ್ನು ಕೊಡಬೇಕು. ಅದು ಲ್ಯಾಂಡ್ ಲೆವಲಿಂಗ್ ಇರಬಹುದು. ರಸ್ತೆ ಇರಬಹುದು, ಸ್ಟಾಲ್ಟಿಂಗ್ ಇರಬಹುದು, ಡ್ರೈನೇಜ್ ಇರಬಹುದು, ಕುಡಿಯುವ ನೀರು ಇರಬಹುದು, ಪೋಸ್ಟ್ ಆಫೀಸ್ ಇರಬಹುದು, ವೆಟರ್‌ನರಿ ಆಸ್ಪತ್ರೆ ಇರಬಹುದು, ಅದರ ನಂತರ ದವಾಖಾನೆ ಇರಬಹುದು, ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಇರಬಹುದು, ಪಬ್ಲಿಕ್ ಟಾಯ್ಲೆಟ್ಸ್ ಇರಬಹುದು. ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅಲ್ಲಿ ಬಿಲ್ಡ್ ಅಪ್ ಮಾಡಿ ಕೊಟ್ಟಿದ್ದೇವೆ. ಇನ್ನೂ ಏನಾದರೂ ಅಲ್ಲಿ ಆಗಬೇಕೆಂದು ಸಲಹೆ ಕೊಟ್ಟರೆ, ನಾನು ಖಂಡಿತವಾಗಿಯೂ ಪರಿಶೀಲಿಸಿ, ಆ ಕೆಲಸಗಳನ್ನು ಮಾಡಿಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಮತ್ತೊಂದು ಈ ಜನ ಹೊರತಾಗಿ ಮಾನ್ಯ ಸದಸ್ಯರು ಹೇಳಿದಹಾಗೆ ಇನ್ನೂ ಯಾರು ಜಮೀನು ಕಳೆದುಕೊಂಡಿದ್ದಾರೆ, ನಮ್ಮ ಗಮನಕ್ಕೆ ಬಂದಿಲ್ಲವೆಂಬುದು ಇದ್ದರೆ, ಅವರನ್ನು ನಮ್ಮ ಗಮನಕ್ಕೆ ತಂದರೆ ಅವರಿಗೂ ಸಹ ಯೋಗ್ಯ ಪರಿಹಾರ ಕೊಡುವುದಕ್ಕೆ ಸರ್ಕಾರ ಎಲ್ಲಾ ರೀತಿಯಿಂದ ಪ್ರಯತ್ನ ಮಾಡುತ್ತದೆಂದು ತಮ್ಮ ಮೂಲಕ ಅವರಿಗೆ ಭರವಸೆ ಕೊಡುತ್ತೇನೆ.

ಶ್ರೀ ವಿಜಯಕುಮಾರ ಶೆಟ್ಟಿ : ಮಾನ್ಯ ಸಚಿವರು 497 ಜನ ಎಂದು ಹೇಳುತ್ತಿದ್ದಾರೆ. ಆದರೆ, ಅಲ್ಲಿ 613 ಜನ ನಿರ್ವಸಿತಗರಿದ್ದಾರೆ. ಅವರು ದಯವಿಟ್ಟು ಇದನ್ನು ಸರಿ ಮಾಡಿಕೊಳ್ಳಬೇಕು. ಪಾರ್ಲಿಮೆಂಟ್‌ನಲ್ಲಿ ಈ ಪ್ರಶ್ನೆ ಕೇಳಿದ್ದರಿಂದ, ಈಗಾಗಲೇ ಕೇಂದ್ರಸರ್ಕಾರದಿಂದ ಒಂದು ಆಯೋಗ ಬಂದಿತ್ತು. ಎಲ್ಲರಿಗೂ ಒಂದು ಕೆಲಸವನ್ನು ಕೊಡಬೇಕೆಂದು ಅವರೂ ಸಹ ಆದೇಶವನ್ನು ಕೊಟ್ಟಿದ್ದಾರೆ.

ಆದರೆ, ಇನ್ನೂ ಆ ರೀತಿ ಮಾಡಿಲ್ಲ. ಆದ್ದರಿಂದ ಪ್ರತಿಯೊಬ್ಬರಿಗೂ ಕೆಲಸ ಕೊಡುವಂಥ ವ್ಯವಸ್ಥೆಯನ್ನು ಈ ಕಂಪನಿಗೆ ಮಾಡಿದರೆ, ಮುಂದೆ ಬರುವಂಥ ಕಂಪನಿಯವರೂ ಇದನ್ನೇ ಅನುಸರಿಸುತ್ತಾರೆ. ಇವರು ನಮ್ಮ ಮೇಲೆ ಸವಾರಿ ಮಾಡಲಿಕ್ಕೆ ಶುರು ಮಾಡಿದರೆ ಖಂಡಿತವಾಗಿಯೂ ಕಷ್ಟವಾಗುತ್ತದೆ. ನಾನು ಎಲ್ಲವನ್ನೂ ಬಿಚ್ಚಿ ಹೇಳುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಖಂಡಿತವಾಗಿಯೂ ಕೆಲಸ ಕೊಡುವಂಥ ವ್ಯವಸ್ಥೆಯನ್ನು ಮಾಡಲೇಬೇಕು. ಮಾನ್ಯ ಸಚಿವರು ನಿರ್ವಸಿತಗರ ಪ್ರದೇಶದಲ್ಲಿ ಬೇಕಾದ ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದೇವೆಂದು ಹೇಳಿದರು. 1994 ರಿಂದ ನಿರ್ವಸಿತಗರಾಗಿದ್ದಾರೆ, ಇಷ್ಟರವರೆಗೆ ಅಲ್ಲಿ ಉಪ್ಪು ನೀರು ಬರುತ್ತಾ ಇದೆ. ಕನಿಷ್ಟ ನಾಗರೀಕ ಸೌಲಭ್ಯಗಳೇನಿದೆ, ಅವುಗಳನ್ನು ಇನ್ನೂ ಪೂರೈಸುವುದಕ್ಕಾಗಿಲ್ಲ. ಇವತ್ತು ನೀವು ನನ್ನ ಜೊತೆಯಲ್ಲಿ ಬಂದರೆ ತೋರಿಸಿಕೊಡುತ್ತೇನೆ. ಪೋಸ್ಟ್ ಆಫೀಸ್ ಇಲ್ಲ, ಆಸ್ಪತ್ರೆ ಇಲ್ಲ, ಡ್ರೈನೇಜಿನ ವ್ಯವಸ್ಥೆ ಸರಿಯಾಗಿ ಆಗಿಲ್ಲ. ಕೇವಲ 10-20 ಟ್ಯೂಬ್ ಲೈಟ್ ದಾರಿಯಲ್ಲಿ ಉರಿಯುತ್ತಿದೆಯೇ ಹೊರತು ಅಲ್ಲಿ ಯಾವುದೇ ವ್ಯವಸ್ಥೆ ಆಗಿಲ್ಲ. ಆದ್ದರಿಂದ ದಯವಿಟ್ಟು ತಾವು ಈ ಉತ್ತರವನ್ನು ಕೊಡುತ್ತಿದ್ದರೆ, ಬಹಳ ಬೇಸರವಾಗುತ್ತಿದೆ. ಒಂದೇ ಒಂದು ವ್ಯವಸ್ಥೆ ಅಲ್ಲಿ ಸರಿಯಾಗಿ ಆಗಿಲ್ಲ. ಆದ್ದರಿಂದ, ನಿರ್ವಸಿತಗರ ಪ್ರದೇಶಕ್ಕೆ ಕನಿಷ್ಟ ನೀರಿನ ವ್ಯವಸ್ಥೆಯನ್ನಾದರೂ ತಕ್ಷಣದಲ್ಲಿ ಮಾಡಬೇಕು. ಇತರ ಬೇಡಿಕೆಗಳನ್ನೂ ತಾವು ಖಂಡಿತವಾಗಿ ಮಾಡಿಕೊಟ್ಟರೆ ಮುಂದಿನ ಇಂಡಸ್ಟ್ರೀಸ್ ಏನು ಬರುತ್ತಾ ಇದೆ, ಅದಕ್ಕೆ ಸ್ವಲ್ಪ ಅವಕಾಶ ಮಾಡಿದ ಹಾಗೆ ಆಗುತ್ತದೆ. ನಿಮಗೆ ಅಧಿಕಾರಿಗಳ ಅಥವಾ ಬೇರೆಯವರ ಮುಖಾಂತರ ಸುಳ್ಳು ಉತ್ತರಗಳು ಬರುತ್ತಾ ಇದೆ. ಇದನ್ನು ನಾನು ನೇರವಾಗಿ ಹೇಳುತ್ತೇನೆ. 5 ವರ್ಷಗಳ ಕಾಲ ಕೆ.ಐ.ಎ.ಡಿ.ಬಿ. ಯವರು ನೋಡಬೇಕೆಂದು ಈ ನಿರ್ವಸಿತಗರ ಕಾಲೋನಿಯನ್ನು ಕೊಟ್ಟಿದ್ದಾರೆ. ಈಗ 5 ವರ್ಷಗಳು ಆಯಿತು. ಇನ್ನೂ ಸಹ ಅವರು, ಅವರ ಕಾಲ ಮೇಲೆ ನಿಲ್ಲುವಂಥ ಪರಿಸ್ಥಿತಿ ಇಲ್ಲ. ಈ 5 ವರ್ಷ ಏನು ಮಾಡಿದ್ದಾರೆ, ಇದನ್ನು ಇನ್ನೂ 5 ವರ್ಷ ಹೆಚ್ಚು ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸದಸ್ಯರು ಸತ್ಯಕ್ಕೆ ದೂರ ಎಂದು ಹೇಳುತ್ತಾರೆ. ನಾನು ಸ್ವಂತ: ವಿಸಿಟ್ ಮಾಡುತ್ತೇನೆ. ಶಾಸಕರನ್ನೂ ಕರೆದುಕೊಂಡು ಹೋಗುತ್ತೇನೆ. ಅಲ್ಲಿ ಇನ್ನೂ ಏನೇನು ಆಗಬೇಕು ಆ ಎಲ್ಲಾ ಕೆಲಸಗಳನ್ನೂ ಮಾಡಿಕೊಡಲು ಸರ್ಕಾರ ಪ್ರಯತ್ನ ಮಾಡುತ್ತದೆ. ಅಷ್ಟೆ ಅಲ್ಲ, ಅವರೇನು ಹೇಳುತ್ತಿದ್ದಾರೆ. ಈಗ ಈ ಕಾಲೋನಿಯಾಗಿ 5 ವರ್ಷಗಳು ಆಯಿತು ನಾವು ಇದರ ಬಗ್ಗೆ ಕೆಲವು ದಿವಸಗಳ ಹಿಂದೆ ಸಭೆ ಮಾಡಿದಾಗ ಇದನ್ನು ಜಿಲ್ಲಾಪರಿಷತ್ತಿನವರು ತೆಗೆದುಕೊಳ್ಳುವುದಕ್ಕೆ ಒಪ್ಪಿಕೊಂಡಿದ್ದಾರೆ. It is going to be transferred to the Zilla Panchayat for the maintenance. 5 ವರ್ಷ ಮಾಡಿದ್ದಾರೆ. ಹಾಗಾಗಿ ಇದು ನಾವು ಜಿಲ್ಲಾಪರಿಷತ್ತಿಗೆ ಕೊಡಬೇಕಾಗುತ್ತದೆ. ಆದರೂ ಸಹ ಶಾಸಕರೇನು ಹೇಳುತ್ತಿದ್ದಾರೆ ನಾನು ಸ್ವತ: ಆದಷ್ಟು ಬೇಗನೆ ಭೇಟಿ ಕೊಟ್ಟು, ಅಲ್ಲಿ ಇನ್ನೂ ಏನು ಸುಧಾರಣೆ ಆಗಬೇಕು, ಅವುಗಳನ್ನು ಖಂಡಿತವಾಗಿಯೂ ಸರ್ಕಾರದವರು ಪರಿಶೀಲನೆ ಮಾಡಿ ಎಷ್ಟು ಸಾಧ್ಯ, ಅಷ್ಟು ಇತಿಮಿತಿಯಲ್ಲಿ ಮಾಡಿಕೊಡುತ್ತೇವೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಸಭಾಧ್ಯಕ್ಷರೇ, ಇದೊಂದು ಅವಿಭಾಜಿತ ದಕ್ಷಿಣ ಕನ್ನಡ ಜಿಲ್ಲೆಯ ಬಹಳ ಪ್ರಾಮುಖ್ಯವಾದಂಥ ಒಂದು ಘಟನೆ. ಎಂ.ಆರ್.ಪಿ.ಎಲ್. ಎಂದು ಹೇಳುವುದು ಈ ಜಿಲ್ಲೆಗೆ ಒಂದು ರಾಕ್ಷಸ. ಇದು ಪ್ರಶ್ನೋತ್ತರ ಅವಧಿಯಲ್ಲಿ ಬರುವುದು ಅಲ್ಲ. ದಯವಿಟ್ಟು ತಾವು ನಾಡಿದ್ದು ವಿಧಾನ ಸಭೆ ಮುಗಿಯುವುದರೊಳಗೆ ಇದರ ಬಗ್ಗೆ ಅರ್ಧಗಂಟೆ ಕಾಲಾವಧಿಯ ಚರ್ಚೆಗೆ ನಮಗೆ ಅವಕಾಶ ಮಾಡಿಕೊಡಿ. ಕೂಲಂಕಷವಾಗಿ ಅಂಕಿಅಂಶಗಳ ಸಮೇತ ಇಡುತ್ತೇವೆ. ಅಲ್ಲಿ ಎಷ್ಟು ಜನರಿಗೆ ಕೆಲಸ ಕೊಟ್ಟಿದ್ದಾರೆ, ಏನು ಮಾಡುತ್ತಿದ್ದಾರೆ. ಸರ್ಕಾರವನ್ನು ಯಾವರೀತಿ ಲೂಟಿ ಮಾಡಿದರು, ಯಾವರೀತಿ ಜನರಿಗೆ ಅನ್ಯಾಯವಾಗುತ್ತಿದೆ ಎನ್ನುವುದನ್ನು ಕೂಲಂಕಷವಾಗಿ ಇಲ್ಲಿ ಚರ್ಚೆ ಮಾಡಬೇಕು. ನಾನು ಅರ್ಧ ಗಂಟೆಯ ಚರ್ಚೆಗೆ ನೋಟೀಸ್ ಕೊಡುತ್ತೇನೆ. ದಯವಿಟ್ಟು ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೇ, ಇದೊಂದು ಜ್ವಲಂತ ಸಮಸ್ಯೆ. ಇದಕ್ಕೆ ಶಾಶ್ವತ ಪರಿಹಾರ ಆಗಬೇಕೆಂದು ಹೇಳಿದರೆ, ಇದೊಂದು ಸುಧೀರ್ಘ ಚರ್ಚೆಯಾಗಬೇಕು. ಅನಂತರ ಸಂಬಂಧಪಟ್ಟ ವಿಚಾರಗಳ ಬಗ್ಗೆ ಮಂತ್ರಿಗಳು ನಮಗೆ ಕ್ಲಾರಿಫೈ ಮಾಡಬೇಕು. ಇದರಿಂದ ಎಲ್ಲಾ ಮುಗಿಯುತ್ತದೆಯೇ ಹೊರತು ಇವತ್ತು ಬರೀ ಚರ್ಚೆ ಮತ್ತು ಉತ್ತರದಲ್ಲಿ ಇಲ್ಲಿಗೇ ಮುಗಿಯುವುದಿಲ್ಲ. ಆದಕಾರಣ ಸಭಾಪತಿಯವರು ಹೇಳಿದರೀತಿಯಲ್ಲಿ ಅರ್ಧ ಗಂಟೆ ಚರ್ಚೆಗೆ ತಾವು ಸ್ವೀಕಾರ ಮಾಡಿದರೆ ಬಹುಶಃ ಇದಕ್ಕೆ ಶಾಶ್ವತ ಪರಿಹಾರ ಆ ಮಂಗಳೂರಿನ ಎಂ.ಆರ್.ಪಿ.ಎಲ್.ನ ಪರಿಸರದಲ್ಲಿ ಆಗಬಹುದು ಎಂದು ನನ್ನ ವಿನಂತಿ. ಆದಕಾರಣ ತಾವು ಅವಕಾಶ ಕೊಡಬೇಕು.

ಶ್ರೀ ವಿಜಯಕುಮಾರಶೆಟ್ಟಿ : ಕೇಂದ್ರ ಸರ್ಕಾರದ ಆಯೋಗದವರು ಬಂದು ವೀಕ್ಷಣೆ ಮಾಡಿ ಅದಕ್ಕೆ ಬೇಕಾದ ಪರಿಹಾರವನ್ನು ಸೂಚಿಸಿದ್ದಾರೆ. ಅವರೇನು ಸೂಚಿಸಿದ್ದಾರೆ, ಅದು ನಮಗೆ ಸಿಗಲಿಲ್ಲ. ಆದರೆ, ಅವರು ನಿಜವಾಗಿಯೂ ಅಲ್ಲಿಯ ಜನರ ಕಷ್ಟವನ್ನು ಮನಗಂಡು ಒಳ್ಳೆಯ ಪರಿಹಾರವನ್ನು, ಮಾರ್ಗೋಪಾಯವನ್ನು ಸೂಚಿಸಿ ಕೇಂದ್ರ ಸರ್ಕಾರಕ್ಕೆ ಬರೆದು ಕೊಟ್ಟಿದ್ದಾರೆ. ಆದರೆ, ಕೇಂದ್ರ ಸರ್ಕಾರದಿಂದಲೂ ಇದಕ್ಕೆ ಬೇಕಾದಂಥ ವ್ಯವಸ್ಥೆಯನ್ನು ಮಾಡಲಿಲ್ಲ.

11.30 ಎ.ಎಂ

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ ನಮಗೆ ಬಂದಿರತಕ್ಕಂಥ ಸಮಸ್ಯೆ ಏನೆಂದರೆ ನಮ್ಮ ಜಿಲ್ಲೆಯಲ್ಲಿರತಕ್ಕಂಥ ಬೃಹತ್ ಉದ್ದಿಮೆಗಳು ಪ್ಯಾರಲಲ್ ಸರ್ಕಾರವನ್ನು ನಡೆಸುತ್ತಿದೆಯೇ ಎನ್ನುವಂತಹ ಪ್ರಶ್ನೆ ನಮಗೆ ಉದ್ಭವಿಸುತ್ತಿದೆ. ನಾವು ಬಾಕಿ ಇದ್ದರೆ ಬೇರೆಯವರ ಹತ್ತಿರ ವಸೂಲಿ ಮಾಡುವುದಕ್ಕೆ ಏನೂ ಹಿಂದುಮುಂದು ನೋಡುವುದಿಲ್ಲ. ಕೆ.ಇ.ಬಿ. ಬಿಲ್ ಬಾಕಿ ಇದ್ದರೆ ತಕ್ಷಣ ಡಿಸ್‌ಕನೆಕ್ಷನ್ ಮಾಡಿಬಿಡುತ್ತೇವೆ. ಆದರೆ, ಇವತ್ತು 18 ಕೋಟಿ 16 ಲಕ್ಷ ರೂಪಾಯಿಗಳನ್ನು ಮೂಡಾಕ್ಕೆ ಕೊಡುವಂಥಾದ್ದು ಬಾಕಿ ಇದ್ದರೂ ಸಹ ಅದನ್ನು ವಸೂಲಿ ಮಾಡುವುದಕ್ಕೆ ಸರ್ಕಾರಕ್ಕೆ ಆಗಿಲ್ಲ. ಆದರೆ ಈ ಬಗ್ಗೆ ನಮ್ಮ ಮಾನ್ಯ ಸಚಿವರು ಏಕೆ ಸಹಾನುಭೂತಿಯನ್ನು ತೋರಿಸುತ್ತಿದ್ದಾರೆಂದು. ಇನ್ನು ಉದ್ಯೋಗದ ಬಗ್ಗೆ ಎಷ್ಟು ಜನ ಸ್ಥಳೀಯರಿಗೆ ಅವಕಾಶ ಕೊಟ್ಟಿದ್ದಾರೆಂದು

ಇದರ ಬಗ್ಗೆ ಏಕೆ ಸರ್ಕಾರ ಅವರನ್ನು ಕೇಳುತ್ತಿಲ್ಲ ಎಂದು. ಇವತ್ತು ಆಂಧ್ರಪ್ರದೇಶ ಮತ್ತು ತಮಿಳುನಾಡಿನಿಂದ ಬಂದಂತಹವರಿಗೆ ಅವಕಾಶವನ್ನು ಕೊಡುತ್ತಿದ್ದಾರೆಯೇ ಹೊರತು ಸ್ಥಳೀಯರಿಗೆ ಅವಕಾಶ ಸಿಗುತ್ತಿಲ್ಲ. ಅಲ್ಲಿ ವ್ಯವಸ್ಥಿತವಾಗಿ ಇದು ನಡೆಯುತ್ತಿದೆ. ಅಲ್ಲಿ ಬರುವಂತಹ ತಾಜ್ಯವಸ್ತುಗಳು ಸಮುದ್ರಕ್ಕೆ ಸೇರುತ್ತಿದೆ. ಅಲ್ಲಿರತಕ್ಕಂಥ ಪರಿಸರ ಮಂಡಲಿ ಏನೂ ಕೆಲಸ ಮಾಡುತ್ತಿಲ್ಲ. ಈ ಆರೋಪವನ್ನು ನಾನು ಸ್ಪಷ್ಟವಾಗಿ ಇಲ್ಲಿ ಮಾಡಲಿಕ್ಕೆ ಇಚ್ಛಿಸುತ್ತೇನೆ.

ಅಧ್ಯಕ್ಷರು : ಸಭಾಪತಿಯವರೇ, ತಾವು ಅರ್ಧ ಗಂಟೆ ಕಾಲಾವಧಿಯಲ್ಲಿ ಚರ್ಚೆ ಮಾಡುವುದಕ್ಕೆ ಒಂದು ನೋಟೀಸ್ ಕೊಡಿ. ಅದನ್ನು ತೆಗೆದುಕೊಳ್ಳಬಹುದೋ ಅಥವಾ ಬೇಡವೋ ಎನ್ನುವುದನ್ನು ನಾನು ಅದರ ಮೆರಿಟ್ಸ್ ಮೇಲೆ ನೋಡುತ್ತೇನೆ.

ಶ್ರೀ ವಿಜಯಕುಮಾರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಇಲ್ಲಿಗೆ ಐ.ಡಿ.ಬಿ. ಅಧಿಕಾರಿಗಳು ಬಂದಿದ್ದಾರೆ. ಮಾನ್ಯ ಸಚಿವರು ಇನ್ನು 5 ವರ್ಷಗಳ ಕಾಲ ಎಕ್ಸ್‌ಟೆಂಡ್ ಮಾಡುತ್ತೇವೆಂದು ಹೇಳಿದರೆ ನಾನು ಬೇರೆ ಪ್ರಶ್ನೆ ಕೇಳುವುದಿಲ್ಲ. ಏಕೆಂದರೆ ಅಲ್ಲಿ ಈಗಾಗಲೇ ಕುಡಿಯುವ ನೀರು ಇಲ್ಲ. ಕುಡಿಯುವ ನೀರು ತರಲು ಸುಮಾರು ಎರಡು ಮೂರು ಕಿಲೋಮೀಟರ್ ದೂರ ಹೋಗಬೇಕಾಗಿದೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಅದು ಕೆ.ಐ.ಡಿ.ಬಿ. ಕಾಲೋನಿ ಅಲ್ಲ. ಕೆ.ಐ.ಡಿ.ಬಿ. ಕಾಲೋನಿಯಾಗಿದ್ದರೆ ಅದನ್ನು ನಾವು ಖಾಯಂ ಆಗಿ ನೋಡಬಹುದು. ಈಗ ಸರ್ಕಾರ ಒಪ್ಪಿಕೊಂಡಿರುವ ಹೊಸ ರಾಜ್ಯಾಂಗದ ತಿದ್ದುಪಡಿ ಪ್ರಕಾರ ಸರ್ಕಾರ ಒಪ್ಪಿಕೊಂಡರೆ ಇಂಡಸ್ಟ್ರೀಯಲ್ ಸ್ಟೇಟ್ಸ್ ಮಾಡಬೇಕೆಂದು ಇದೆ. ಆಗ ಅದನ್ನು ನಾವು ವಿಚಾರ ಮಾಡಬಹುದು. ಇದು ಪುನರ್ವಸತಿ ಕಾರ್ಯಕ್ರಮ. ಕೆ.ಐ.ಡಿ.ಬಿ. ಕೆಲಸ ಮಾತ್ರ ಮಾಡಿದೆ. ಅವರು ಅಲ್ಲಿ ಆಸ್ಪತ್ರೆ, ಪೋಸ್ಟ್ ಆಫೀಸ್ ಇಂತಾದ್ದು ಮಾಡುವುದು. ಅಲ್ಲಿ ಏನಾಗಬೇಕಾಗಿದೆ ಅದನ್ನೆಲ್ಲಾ ನಾವು ಮಾಡಿಕೊಡುತ್ತೇವೆ. ನಾನೇ ಸ್ವತಹಃ ಖುದ್ದಾಗಿ ಹೋಗಿ ನೋಡಿ ಮಾಡಿಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳೇ, ಅಲ್ಲಿಗೆ ಭೇಟಿ ನೀಡುತ್ತೇನೆಂದು ಹೇಳಿದ್ದಾರಲ್ಲ. ಆಯಿತು ಬಿಡಿ.

ಶ್ರೀ ವಿಜಯಕುಮಾರ್ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ನಾನು ಹೇಳುತ್ತಿರುವುದು 5 ವರ್ಷಗಳು ಆಯಿತು ಇದುವರೆಗೂ ಮಾಡಲಿಲ್ಲ. ಆದ್ದರಿಂದ ನಾನು ಇನ್ನು 5 ವರ್ಷ ಎಕ್ಸ್‌ಟೆನೆಷನ್ ಕೊಡಿ ಎಂದು ಕೇಳುತ್ತಿರುವುದು. ಈ ದೇಶದ ಅಭಿವೃದ್ದಿಗೋಸ್ಕರ ಆ ಜನ ಜಾಗ ಕೊಟ್ಟಿದ್ದಾರೆ. ಸರ್ಕಾರ ಇಷ್ಟು ಮಾಡಲಿಕ್ಕೆ ಆಗುವುದಿಲ್ಲವೆಂದರೆ ಹೇಗೆ?

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, 5 ವರ್ಷಕ್ಕೆ ನಾವೆಲ್ಲಿ ಕೊಡುತ್ತಿದ್ದೇವೆ ನೀವು ನಿಮ್ಮ ಕೆಲಸ ನೋಡಿ ಎಂದು ಹೇಳುತ್ತಿಲ್ಲ. ಇದನ್ನು ಜಿಲ್ಲಾ ಪರಿಷತ್ತಿಗೆ ಕೊಡುತ್ತಿದ್ದೇವೆ. ಅವರು ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದಾರೆ ಇವರಿಗೇನು ಕಷ್ಟ? ಜಿಲ್ಲಾ ಪರಿಷತ್ತಿಗೆ ನಾವು ಹ್ಯಾಂಡ್‌ಓವರ್ ಮಾಡುತ್ತಿದ್ದೇವೆ.

ಶ್ರೀ ವಿಜಯಕುಮಾರ ಶೆಟ್ಟಿ : ಸರ್ಕಾರ ಜಿಲ್ಲಾ ಪರಿಷತ್ತಿಗೆ ಕೊಟ್ಟರೆ ತೆರಿಗೆ ಕೊಡಬೇಕಾಗುತ್ತದೆ, ಅದನ್ನು ಕೊಡುವ ತಾಕತ್ತು ಆ ಜನರಿಗೆ ಇಲ್ಲ. ಮಾನ್ಯ ಅಧ್ಯಕ್ಷರೇ, ಪೊಲೀಸ್ ಇಲಾಖೆಯಿಂದ ಮೂಡಾಕ್ಕೆ ಲಕ್ಷಾಂತರ, ಕೋಟ್ಯಾಂತರ ರೂಪಾಯಿ ಬಾಕಿ ಇದೆ.

ಅಧ್ಯಕ್ಷರು : ಈಗ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ನೋಟೀಸ್ ಕಳುಹಿಸಿಕೊಡುತ್ತೇವೆಂದು ಹೇಳಿದ್ದಾರೆ, ತಾವು ಆಗ ಚರ್ಚೆ ಮಾಡಿ.

ಶ್ರೀ ವಿಜಯಕುಮಾರ ಶೆಟ್ಟಿ : ಅಲ್ಲಿ ಜನ ಬಂದಿದ್ದಾರೆ ಅವರನ್ನು ಖಾಲಿ ಮಾಡಿ ಎಂದು ಹೇಳುವುದಕ್ಕೆ. ಆದ್ದರಿಂದ, ಮಾನ್ಯ ಸಚಿವರು 5 ವರ್ಷ ಎಕ್ಸ್‌ಟೆನ್‌ಷನ್ ಮಾಡಲಿ ಆಮೇಲೆ ಬೇಕಾದರೆ ನಾವು ಅರ್ಧ ಗಂಟೆ ಕಾಲಾವಧಿಯ ಚರ್ಚೆ ಮಾಡೋಣ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಅವರಿಗೆ ತಪ್ಪು ತಿಳುವಳಿಕೆ ಆಗಿದೆ. ಅವರು ಖಾಲಿ ಮಾಡುವಂತಹ ಸಂದರ್ಭ ಇಲ್ಲ. ಇದು ಪುನರ್ವಸತಿ ಕಾಲೋನಿ. ಇದು ಕೆ.ಐ.ಡಿ.ಬಿ. ಕಾಲೋನಿಯಲ್ಲ. ಅಲ್ಲಿ ನಮ್ಮ ಕಂಟ್ರಾಕ್ಟರ್ಸ್ ಅದನ್ನು ಬಿಲ್ಡ್‌ಅಪ್ ಮಾಡಿ ಆಸ್ಪತ್ರೆ ಕಟ್ಟುತ್ತೇವೆ, ವೆಟರ್‌ನರಿ ಆಸ್ಪತ್ರೆಯನ್ನು ಕಟ್ಟುತ್ತೇವೆ, ವಾಟರ್ ಸಪ್ಲೈ ಮಾಡಿದ್ದೇವೆ. ಒಂದು ವೇಳೆ ಅಲ್ಲಿ ಇನ್ನೂ ಏನಾದರೂ ಕೊರತೆ ಇದ್ದರೆ ನಾನೇ ಸ್ವತಹಃ ಭೇಟಿ ನೀಡಿ ಪರಿಶೀಲನೆ ಮಾಡಿ ಮಾಡಿಕೊಡುತ್ತೇನೆ. ಇದನ್ನು ಜಿಲ್ಲಾ ಪರಿಷತ್ತಿಗೆ ವಹಿಸಿಕೊಡುವವರಿದ್ದೇವೆ.

ರಾಜ್ಯದಲ್ಲಿ ಸಣ್ಣ ನೀರಾವರಿ ಕೆರೆಗಳು

95 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ರಾಜ್ಯದಲ್ಲಿ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)*

2) *ಸಣ್ಣ ಕೆರೆಗಳ ದುರಸ್ತಿ ಮತ್ತು ಹೂಳೆತ್ತುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಯಾವುವು?*

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

1. ಒಟ್ಟು 36,661 ಕೆರೆಗಳು ಜಿಲ್ಲಾವಾರು ವಿವರ ಅನುಬಂಧ -1ರಲ್ಲಿದೆ.

2. 98-99ರ ಸಾಲಿನಲ್ಲಿ ರೈತರ ಸಹಯೋಗದಿಂದ ಹೂಳೆತ್ತುವ ಯೋಜನೆ ರೂಪಿಸಿದೆ. 98-99ರ ಸಾಲಿನಲ್ಲಿ ಕೆರೆಗಳ ಒಳಪಟ್ಟಿದ್ದು ಸುಧಾರಣೆ ಅಡಿಯಲ್ಲಿ 1000.00 ಲಕ್ಷಗಳನ್ನು 99-2000ರ ಸಾಲಿನಲ್ಲಿ 600.00 ಲಕ್ಷ ರೂ.ಗಳು ಪ್ರತ್ಯೇಕವಾಗಿ ಹೂಳೆತ್ತಲು) ಅನುದಾನದಲ್ಲಿ ಒದಗಿಸಲಾಗಿದೆ. ಅಂತೆಯೇ ಮುಂದಿನ ವರ್ಷಗಳಲ್ಲಿ ಕೂಡ ಅನುದಾನ ಲಭ್ಯತೆ ಅನುಸರಿಸಿ ಕೆರೆಗಳ ಹೂಳೆತ್ತುವ ಕಾರ್ಯಕ್ರಮ ರೂಪಿಸಲಾಗುವುದು, ಅಲ್ಲದೆ 5 ವರ್ಷಗಳಲ್ಲಿ 5000 ಕೆರೆಗಳ ಹೂಳನ್ನು ತೆಗೆಯುವ ಗುರಿ ಹೊಂದಿದ್ದು ಈ ಬಗ್ಗೆ ವಿಶ್ವಬ್ಯಾಂಕ್‌ನಿಂದ 1000 ಕೋಟಿ ರೂ ಸಾಲ ಪಡೆಯುವ ನಿಟ್ಟಿನಲ್ಲಿ ಸಮಗ್ರ ಯೋಜನೆಯನ್ನು ರೂಪಿಸುವ ಪ್ರಸ್ತಾವನೆ ಸರ್ಕಾರದಲ್ಲಿದೆ.